ಆ) ಆಗಸ್ಟ್–2014 ರಲ್ಲಿ ಅರ್ಜಿ ಸಲ್ಲಿಸಲು ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

ಇ) ಆಗಸ್ಟ್–2014 ರಿಂದ ತರಬೇತಿಯನ್ನು ಪ್ರಾರಂಭಿಸಲಾಗುವುದು.

ನಿವೇಶನ ರಹಿತರಿಗೆ ನಿವೇಶನ ಹಂಚುವುದು

390 (636); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ರಾಜ್ಯದ ನಿವೇಶನ ರಹಿತ ಕೂಲಿ ಕಾರ್ಮಿಕರು, ಹಮಾಲಿಗಳು ಹಾಗೂ ಇನ್ನಿತರ ಬಡ ಜನತೆಗೆ ನಿವೇಶನ ಹಂಚಲು ಜಮೀನು ಮಂಜೂರು ಮಾಡಬೇಕಾದರೆ ಸರ್ಕಾರ ಅನುಸರಿಸುವ ಅಥವಾ ಇರುವ ನಿಯಮಗಳೇನು; (ವಿವರಗಳನ್ನು ನೀಡುವುದು)

ಆ) ಜಮೀನು ಮಂಜೂರು ಮಾಡಿದಾಗ ಜಮೀನಿನ ಮೌಲ್ಯದ ಅರ್ಧದಷ್ಟು ಹಣ ಪಾವತಿಸಬೇಕು ಎಂಬ ನಿಯಮ ಇದೆಯೇ (ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಬಡ ನಿವೇಶನ ರಹಿತರಿಗೆ ಜಮೀನು ಮಂಜೂರಾತಿಗೆ ಹಣ ಪಾವತಿ ಮಾಡದೇ ಇದ್ದಲ್ಲಿ ಜಮೀನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು; (ವಿವರ ನೀಡುವುದು)?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ನಿವೇಶನ ರಹಿತ ಬಡ ಜನತೆಗೆ ನಿವೇಶನ ಹಂಚಲು ಆಶ್ರಯ ಯೋಜನೆ ಹಾಗೂ ರಾಜೀವ್ ಗಾಂಧೀ ವಸತಿ ನಿಗಮ ನಿಯಮಿತ ಇವರ ಮುಖಾಂತರ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ನಿಯಮ 20 ರಲ್ಲಿನ ವಿಧಾನವನ್ನು ಅನುಸರಿಸಿ ನೀಡಲಾಗುವುದು.

ಆ) ಭೂ ಮಂಜೂರಾತಿ ನಿಯಮಗಳು 1969 ನಿಯಮ 20(ಎ) ರನ್ವಯ (ಸಬ್‌ಸಿಡಾಜ್ಡ್) ರಿಯಾಯಿತಿ ದರದಲ್ಲಿ ನಿರ್ಮಾಣ ಮಾಡುವ ವಸತಿ ಯೋಜನೆಗಳಿಗೆ ಉಚಿತವಾಗಿ, ಇತರೆ ಪ್ರಕರಣಗಳಲ್ಲಿ ಶೇಕಡ 50 ರ ದರದಲ್ಲಿ ನೀಡಲಾಗುವುದು.

ಇ) ಅನ್ವಯಿಸುವುದಿಲ್ಲ.

ದಾಖಲಿಸಿರುವ ಪ್ರಕರಣಗಳು

391(660); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ

ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಾರ್ಮಿಕ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ ಮತ್ತು ಯಾವ ಹುದ್ದೆಗಳು ಎಷ್ಟೆಷ್ಟು ಅವಧಿಯಿಂದ ಖಾಲಿ ಇವೆ: ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಮುಂದಿನ ಕ್ರಮಗಳೇನು?;

ಇ) ಕಳೆದ ಒಂದು ವರ್ಷದ ಅವಧಿಯಲ್ಲಿ ಈ ಭಾಗದ ಜಿಲ್ಲೆಗಳಲ್ಲಿ ಕಾರ್ಮಿಕ ಇಲಾಖೆಯವರು ಎಷ್ಟು ಪ್ರಕರಣಗಳನ್ನು ದಾಖಲಿಸಿದ್ದಾರೆ; ಎಷ್ಟು ಮೊತ್ತದ ದಂಡ ವಿಧಿಸಿದ್ದಾರೆ; ಇದರಿಂದ ಸಂಗ್ರಹವಾದ ಹಣವೆಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಒಟ್ಟು 6 ಜಿಲ್ಲೆಗಳಿಗೆ ಮಂಜೂರಾಗಿರುವ ಗುಂಪು – 'ಎ' (ಕಿರಿಯ ವೇತನ ಶ್ರೇಣಿ), 'ಬಿ' 'ಸಿ' ಮತ್ತು 'ಡಿ' ಹುದ್ದೆಗಳ ಸಂಖ್ಯೆಯನ್ನು **ಅನುಬಂಧ–1**ರಲ್ಲಿ ಒದಗಿಸಲಾಗಿದೆ.